ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಿಪಿ-12ನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಇರುವ ಸಹಿ ನನ್ನದೇ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಆರ್.ಸಿ., ಪರ್ಮಿಟ್ ಮತ್ತು ಡಿ.ಎಲ್.ನ ನೋಟರಿ ಪ್ರತಿಯಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅಸಲು ಪ್ರತಿಯೊಂದಿಗೆ ತಾಳೆ ಮಾಡಿ ಅವುಗಳನ್ನು ಕ್ರಮವಾಗಿ ನಿಪಿ-14 ರಿಂದ ನಿಪಿ-16 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನನ್ನ ಹೆಸರು ಜಾಬೀರ್ ಎಂದು ತೋರಿಸಲು ಆಧಾರ್ ಕಾರ್ಡ್ ಇದೆ. ವಾಹನ ಸಂಖ್ಯೆ ಕೆಎಲ್-59-ಜೆಡ್-7989 ಲಾರಿ ನನಗೆ ಸೇರಿದ ತೋರಿಸಲು ನನ್ನ ಬಳಿ ದಾಖಲೆ ಇದೆ. ಲಾರಿಗೆ ಸಂಬಂಧಿಸಿದಂತೆ ಪರ್ಮಿಟ್ ಸಹ ಇದೆ. ರಶೀದ್ ರವರು ನನ್ನ ಲಾರಿಯ ಚಾಲಕನಾಗಿದ್ದ ಎಂದು ತೋರಿಸಲು ದಾಖಲೆ ಇದೆ. ಅವರಿಗೆ ಸಂಬಳ ಕೊಟ್ಟಿರುವುದಕ್ಕೆ ದಾಖಲೆ ಸಹ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ರಶೀದ್ ಎನ್ನುವವರನು ಹೊರತುಪಡಿಸಿ ಸಹಬುದ್ದೀನ್ ಸಹ ಕೆಲಸ ಮಾಡುತ್ತಿದ್ದರು. ನನ್ನ ವಾಹನದಲ್ಲಿ ಆದಿನ ಪ್ರಯಾಣಿಸುತ್ತಿದ್ದವರು ನನ್ನ ಬಳಿ ಕೆಲಸ ಮಾಡುತ್ತಿರಲಿಲ್ಲ ಆದರೆ ಅವರು

ಕೇವಲ ಪ್ರಯಾಣಿಕಾರಿಗಿದ್ದರು ಎಂದರೆ ಸರಿಯಲ್ಲ. ರಶೀದ್ ರವರ ತೀರಿಕೊಂಡ ನಂತರ ಅವರ ಕುಟುಂಬಕ್ಕೆ ನಾನು ಸುಮಾರು 70 ಸಾವಿರದಿಂದ 1.00 ಲಕ್ಷ ಪರಿಹಾರ ಕೊಟ್ಟಿರುತ್ತೇನೆ. ರಶೀದ್ ರವರು ನನ್ನ ಬಳಿ ಚಾಲಕನಾಗಿ ಕೆಲಸ ಮಾಡುತ್ತಿಲ್ಲದೇ ಇದ್ದರೂ ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂದು ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು